ಅಧ್ಯಕ್ಷರು.—ಇಲ್ಲಿಗೆ ಚರ್ಚೆ ಮುಂಕ್ತಾಯವಾಯಿತು.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಕಾನೂನು ಉಲ್ಲಂಘನೆ ಆಗಿರತಕ್ಕದ್ದು ಒಂದೇ ಒಂದು ಉದಾಹರಣೆ ಇದ್ದರೂ ಹೇಳಿ ಎಂದು ಮಾನ್ಯ ಸಚಿವರು ಹೇಳಿದರು. ಆದ್ದರಿಂದ ನಾನು ಹೇಳುತ್ತಿದ್ದೇನೆ.

ಶ್ರೀ ಜಿ. ನಾರಾಯಣಕುಮಾರ್.—ನಿಮ್ಮ ಪಕ್ಷದವರು ಸಭಾತ್ಯಾಗ ಮಾಡುತ್ತಿದ್ದಾರೆ, ಇನ್ನೇ ತಕ್ಕೆ ಮಾತನಾಡುತ್ತೀರಿ ?

ಶ್ರೀ ಕೆ ಹೆಚ್. ಪಾಟೀಲ್.—ಸಭಾತ್ಯಾಗ ಮಾಡಿದರೆ ಏನಾಯಿತು ? ಅದೆಲ್ಲಾ ನಿಮಗೆ ಏತಕ್ಕೆ ಬೇಕು? ನೀವು ಏನೂ ಕೇಳುವುದು ಬೇಡವೆಂದು ಮಾನ್ಯ ಅಧ್ಯಕ್ಷರು ಹೇಳುವುದಾದರೆ ಬೇರೆಯವರಂತೆ ನಾವು ಅವರ ಆಜ್ಞೆಯನ್ನು ಮೀರಿ ನಿಲ್ಲುವುದಿಲ್ಲ.

ಅಧ್ಯಕ್ಷರು.—ಪಾಟೀಲ್‌ರವರೇ ನೀವು ಹಿರಿಯ ಸದಸ್ಯರು. ಇಲ್ಲಿಗೆ ಚರ್ಚೆಯನ್ನು ಮುಂಕ್ತಾಯ ಮಾಡೋಣ.

ಶ್ರೀ ಕೆ. ಹೆಚ್. ಪಾಟೀಲ್.—ನೀವು ಏನಾದರೂ ಮಾಡಿಕೊಳ್ಳಿ ನಾವು ಸಭಾತ್ಯಾಗ ಮಾಡುತ್ತೇವೆ.

(ಕಾಂಗ್ರೆಸ್ ಪಕ್ಷದ ಎಲ್ಲ ಸದಸ್ಯರೂ ಸಭಾತ್ಯಾಗ ಮಾಡಿದರು.)

ಅಧ್ಯಕ್ಷರು.—ಬೊಮ್ಮಾಯಿಯವರೇ, ಬರಗಾಲದ ಬಗ್ಗೆ ಹೇಳಿಕೆಯನ್ನು ಮಾಡುತ್ತೇನೆ ಎಂದು ಹೇಳಿದ್ದಿರಲ್ಲ. ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಹಾಗೂ ಯೋಜನಾ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೆ. ಬರಗಾಲದ ಬಗ್ಗೆ ನಾನು ಒಂದು ಸಮಗ್ರವಾದ ಹೇಳಿಕೆಯನ್ನು ಕೊಡುತ್ತೇನೆಂದು ಹೇಳಿದ್ದೆ. ಆದನ್ನು ಈಗ ಕೊಡುತ್ತೇನೆ.

ಮಂತ್ರಿಯವರಿಂದ ಹೇಳಿಕೆ

ಬರ ಪರಿಹಾರ ಕಾರ್ಯಕ್ರಮಗಳ ವಿವರಣೆ

೪-೩೦ ಪಿ. ಯಂ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನಾ ಮತ್ತು ಕಾರ್ಮಿಕ ಸಚಿವರು).—೧೯೮೫-೮೬ ರಲ್ಲಿ ಬರ ಪರಿಸ್ಥಿತಿ

೧. ೧೯೮೫-೮೬ನೇ ಸಾಲಿನಲ್ಲಿಯೂ ಕೂಡ ನಿರಂತರವಾಗಿ ನಾಲ್ಕನೇ ವರ್ಷವೂ ಹಿಂದೆಂದೂ ಕಾಣದಂತಹ ಭೀಕರ ಬರಗಾಲ ಪರಿಸ್ಥಿತಿಯು ಉದ್ಭವಿಸಿ, ರಾಜ್ಯದ ಗ್ರಾಮೀಣ ಪ್ರದೇಶದ ರೈತಾಪಿ ಸಮುದಾಯಕ್ಕೆ ಹಾಗೂ ಜಾನುವಾರು ಸಂಪತ್ತಿಗೆ ವರ್ಣಿಸಲಾಗದ ತೊಂದರೆ ಮತ್ತು ಕಷ್ಟನಷ್ಟ ಉಂಟಾಯಿತು. ಈ ಅವಧಿಯಲ್ಲಿ ಮುಂಗಾರು ಮತ್ತು ಹಿಂಗಾರು ಮಳೆಗಳೆರಡೂ ವಿಫಲವಾಗಿ ಭೀಕರ ಅಭಾವ ಪರಿಸ್ಥಿತಿ ಉದ್ಭವವಾಯಿತು. ೧೯ ಜಿಲ್ಲೆಗಳ ಪೈಕಿ ೧೮ ಜಿಲ್ಲೆಗಳಲ್ಲಿಯ ೧೪೮ ತಾಲ್ಲೂಕುಗಳಲ್ಲಿನ ೨೦,೦೦೦ ಕ್ಕಿಂತಲೂ ಹೆಚ್ಚು ಹಳ್ಳಿಗಳಲ್ಲಿ ಅಭಾವ ಪರಿಸ್ಥಿತಿ ಉದ್ಭವಿಸಿತು. ಇದಲ್ಲದೆ, ಬರಗಾಲ ಪೀಡಿತ ಪ್ರದೇಶದಲ್ಲಿನ ಮಲೆನಾಡು ಮತ್ತು ಕರಾವಳಿ ಜಿಲ್ಲೆಗಳಲ್ಲಿಯೂ ಕೂಡ ಕುಡಿಯುವ ನೀರಿನ ತೀವ್ರ ಅಭಾವವಿತ್ತು. ಸುಮಾರು ೨೧.೬೯ ಲಕ್ಷ ಜನಸಂಖ್ಯೆಯು ತೊಂದರೆಗೀಡಾಯಿತು ಮತ್ತು ೧೦೯.೭೬ ಲಕ್ಷ ಜಾನುವಾರುಗಳು ಸಂಕಷ್ಟಕ್ಕೆ ಸಿಲುಕಿಕೊಂಡವು.

ಪರಿಹಾರ ಕಾರ್ಯಕ್ರಮ

೨. ಇಂತಹ ವಿಷಮ ಪರಿಸ್ಥಿತಿಯನ್ನು ರಾಜ್ಯ ಎದುರಿಸುತ್ತಿರುವಾಗ ರಾಜ್ಯ ಸರ್ಕಾರವು ಬಡ ಕೃಷಿ ಮತ್ತು ಕೃಷಿ ಕಾರ್ಮಿಕ ಕುಟುಂಬಗಳಿಗೆ ಇಂತಹ ಕಠಿಣ ದಿನಗಳಲ್ಲಿ ತಮ್ಮನ್ನು ತಾವು ಕಾಪಾಡಿಕೊಂಡು ಹೋಗುವಷ್ಟು ಶಕ್ತಿ ದೊರಕಿಸಿಕೊಡುವ ಸಲುವಾಗಿ ಸಾಕಷ್ಟು ಉದ್ಯೋಗಗಳನ್ನು ಕಲ್ಪಿಸಿಕೊಟ್ಟಿದ್ದು, ಅಲ್ಲದೆ ಸಾಕಷ್ಟು ಕುಡಿಯುವ ನೀರನ್ನು ಒದಗಿಸುವುದು ಆಹಾರ ಧಾನ್ಯಗಳ ಹಾಗೂ ಮೇವು